65 ಎಕರೆ ಪ್ರದೇಶಕ್ಕೆ ಹಾಕಿದ್ದ ತಂತಿ ಬೇಲಿ ಕಳುವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿರುತ್ತದೆಯೇ;

ಆ. ಬಂದಿದ್ದರೆ ಯಾವಾಗ ಬಂದಿರುತ್ತದೆ. ಮತ್ತು ಯಾರ ಮೇಲೆ ಕ್ರಮಕೈಗೊಳ್ಳಲಾಗಿದೆ;

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):–

ಅ. ಈ ಕ್ಷೇತ್ರವು ತೋಟಗಾರಿಕೆ ಇಲಾಖೆಯ ವಶಕ್ಕೆ ಹಾಸನ ಜಿಲ್ಲಾ ಪರಿಷತ್ತಿನಿಂದ ದಿನಾಂಕ 9.6.1988 ರಂದು ವರ್ಗಾವಣೆಯಾಯಿತು. ಈ ಕ್ಷೇತ್ರವನ್ನು ತೋಟಗಾರಿಕೆ ಇಲಾಖೆಯ ವಶಕ್ಕೆ ತೆಗೆದುಕೊಳ್ಳುವಾಗ ಆದಕ್ಕೆ ತಂತಿ ಬೇಲಿ ಯಾವುದೂ ಇರಲಿಲ್ಲ.

ಆ. ಉದ್ಭವಿಸುವುದಿಲ್ಲ.

ಮಹಾಮಸ್ತಕಾಭಿಷೇಕಕ್ಕೆ ರಾಜ್ಯ ಹಾಗೂ ಕೇಂದ್ರದ ಸಹಾಯಧನ

(2057): ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಶ್ರವಣ ಬೆಳಗೊಳದಲ್ಲಿ ಮಹಾಮಸ್ತಕಾಭಿಷೇಕವು ಯಾವ ತಿಂಗಳಲ್ಲಿ ನಡೆಯಲಿದೆ;

ಆ. ಈ ಮಹಾಮಸ್ತಕಾಭಿಷೇಕಕ್ಕೆ ರಾಜ್ಯ ಸರ್ಕಾರವು ಹಾಗೂ ಕೇಂದ್ರ ಸರ್ಕಾರವು ನೀಡಿರುವ ಸಹಾಯಧನ ಎಷ್ಟು;

ಇ. ಈ ಮಹಾ ಮಸ್ತಕಾಭಿಷೇಕಕ್ಕೆ ಬರುವಾರಿಯನ್ನು ನೋಡಿಕೊಳ್ಳುವ ಸಲುವಾಗಿ ಸರ್ಕಾರದ ವತಿಯಿಂದ ವಿಶೇಷ ಅಧಿಕಾರಿಯನ್ನು ನೇಮಕ ಮಾಡಲಾಗಿದೆಯೇ; ಹಾಗಿದ್ದಲ್ಲಿ ಮಹಾ ಮಸ್ತಕಾಭಿಷೇಕದ ವಿಶೇಷ ಅಧಿಕಾರಿಯವರಿಗೆ ಎಷ್ಟು ಜನ ಸಿಬ್ಬಂದಿ ವರ್ಗದವರನ್ನು ಒದಗಿಸಲಾಗಿದೆ;

ಈ. ಇಲ್ಲದಿದ್ದಲ್ಲಿ ವಿಶೇಷ ಅಧಿಕಾರಿಯವರಿಗೆ ಸಿಬ್ಬಂದಿಯನ್ನು ಒದಗಿಸಿ, ವಿಶೇಷ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಅಗತ್ಯ ನಿರ್ವಹಿಸಲು ಶ್ರವಣಬೆಳಗೊಳಕ್ಕೆ ಹತ್ತಿರವಿರುವ ಚನ್ನರಾಯಪಟ್ಟಣ ಅಥವಾ ಹಾಸನ ನಗರದಲ್ಲಿ ಕಛೇರಿ ಸೌಲಭ್ಯವನ್ನು ಒದಗಿಸಿಕೊಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ಪಾಪಣ್ಣಶೇಖರಮೂರ್ತಿ (ಕಂದಾಯ ಸಚಿವರು):–

ಅ. 1993ರ ಡಿಸೆಂಬರ್ ಮಾಹೆಯಲ್ಲಿ ಆಚರಿಸಲು ಉದ್ದೇಶಿಸಿದೆ.

ಆ. 1992–93ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಮಹಾಮಸ್ತಕಾಭಿಷೇಕ ಲೆಕ್ಕ ಶೀರ್ಷಿಕೆಯಲ್ಲಿ 50 ಕೋಟಿ ರೂ.ವನ್ನು ಒದಗಿಸಿದೆ. ಇದಲ್ಲದೆ ರಾಜ್ಯ ಸಾದಿಲ್ವಾರು ನಿಧಿಯಿಂದ ಕುಡಿಯುವ ನೀರಿನ ವ್ಯವಸ್ಥೆಗಾಗಿ 242.00 ಲಕ್ಷಗಳನ್ನು ಮತ್ತು ಅತಿಥಿ ಗೃಹಗಳ ನಿರ್ಮಾಣ ಹಾಗೂ ರಸ್ತೆಗಳ ಕಾಮಗಾರಿಗಾಗಿ 2.00 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲು ಕ್ರಮ ಕೈಗೊಂಡಿದೆ. 1993–94ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಮಹಾಮಸ್ತಕಾಭಿಷೇಕ ಲೆಕ್ಕ ಶೀರ್ಷಿಕೆಯಲ್ಲಿ 5.00 ಕೋಟಿ ರೂ.ಗಳನ್ನು ಒದಗಿಸಿರುತ್ತದೆ. 1993–94ನೇ ಸಾಲಿನ ವಿವಿಧ ಇಲಾಖೆಗಳ ಕಾಮಗಾರಿಗಾಗಿ ಪ್ರಸ್ತಾವನೆ ಬಂದಿದ್ದು ಇದರ ಪೆಚ್ಚು ಅಂದಾಜು 8.00 ಕೋಟಿಗಳಷ್ಟು ಆಗಿರುತ್ತದೆ. ಹೆಚ್ಚುವರಿ ಹಣವನ್ನು ಆರ್ಥಿಕ ಇಲಾಖೆಯಿಂದ ಪಡೆಯಲು ಕ್ರಮ ಕೈಗೊಳ್ಳಲಾಗುವುದು. ಕೇಂದ್ರ ಸರ್ಕಾರವು

ಮಹಾಮಸ್ತಕಾಭಿಷೇಕದ ಅಂಗವಾಗಿ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ 20.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ಇ. ಹೌದು, ಸರ್ಕಾರದ ಆದೇಶ ಸಂಖ್ಯೆ:ಕಂಇ 287 ಎಂಇಟಿ 92 ದಿ:26-3-1993 ರಲ್ಲಿ ವಿಶೇಷಾಧಿಕಾರಿಯವರನ್ನು ನೇಮಕ ಮಾಡಿದೆ. ಸದರಿ ಅಧಿಕಾರಿಗೆ ಬೇಕಾಗಿರುವ ಸಿಬ್ಬಂದಿಯನ್ನು ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯಿಂದಲೇ ಒದಗಿಸಲು ಸೂಚಿಸಲಾಗಿದೆ.

ಈ. ಮಹಾ ಮಸ್ತಕಾಭಿಷೇಕದ ಕಾರ್ಯಕ್ರಮದ ಅಂಗವಾಗಿ ವಿವಿಧ ಇಲಾಖೆಗಳ ಕಾಮಗಾರಿಗಳು ನಡೆಯಬೇಕಾಗಿದ್ದು ಅದರ ಸಂಬಂಧಿತ ಕಛೇರಿಗಳೆಲ್ಲವು ಬೆಂಗಳೂರಿನಲ್ಲೇ ಇದ್ದು ಕೆಲಸ ಕಾರ್ಯಗಳನ್ನು ನೋಡಿಕೊಳ್ಳಲು ಅನುಕೂಲವಾಗಿರುವುದರಿಂದ ವಿಶೇಷಾಧಿಕಾರಿಯವರ ಕೇಂದ್ರ ಸ್ಥಾನವನ್ನು ಬೆಂಗಳೂರಿನಲ್ಲಿಯೇ ಇಡಬೇಕೆಂದು ಪರಿಗಣಿಸಿ ಇವರು ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯಲ್ಲಿ ಕಾರ್ಯನಿರ್ವಹಿಸುವಂತೆ ವ್ಯವಸ್ಥೆಯನ್ನು ಮಾಡಲಾಗಿದೆ.

ಅನಧಿಕೃತ ಕಟ್ಟಡಗಳ ಬಗ್ಗೆ ನಿರ್ಮಾಣಗಳನ್ನು ತಡೆಯುವುದರ ಬಗ್ಗೆ

(2056): ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಅನಧಿಕೃತ ನಿರ್ಮಾಣಗಳ ತಡೆ ಕಛೇರಿಯು ಬೆಂಗಳೂರು ನಗರದಲ್ಲಿ ಇರುವುದು ನಿಜವೇ;

ಆ. ಎಷ್ಟು ಜನ ಗ್ರೂಪ್-ಬಿ ಅಧಿಕಾರಿಗಳು, ಗ್ರೂಪ್-ಸಿ ಅಧಿಕಾರಿಗಳು ಈ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವರು;

ಇ. ಅನಧಿಕೃತ ಕಟ್ಟಡಗಳ ನಿರ್ಮಾಣಗಳನ್ನು ತಡೆಯುವ ಬದಲು ಜಾಸ್ತಿಯಾಗಿರುವುದು. ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. 1989 ರಿಂದ 1992 ಡಿಸೆಂಬರ್ ಅಂತ್ಯದವರೆಗೆ ಎಷ್ಟು ಅನಧಿಕೃತ ನಿರ್ಮಾಣಗಳನ್ನು ತಡೆ ಹಿಡಿಯಲಾಗಿದೆ;

ಉ. ಈ ಕಛೇರಿಯಿಂದ ಸರ್ಕಾರಕ್ಕೆ ಏನಾದರೂ ಉಪಯೋಗವಾಗಿದೆಯೇ;

ಊ. ಇಲ್ಲದಿದ್ದಲ್ಲಿ ಈ ಕಛೇರಿಯನ್ನು ಮುಚ್ಚಲು ಸರ್ಕಾರವು ಕ್ರಮಕೈಗೊಳ್ಳುವುದೇ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):-

ಅ. ಹೌದು.

ಆ. 5 ಜನ ಗ್ರೂಪ್-ಬಿ ಅಧಿಕಾರಿಗಳು
71 ಜನ ಗ್ರೂಪ್-ಸಿ ನೌಕರರು

ಇ. ಬಂದಿರುತ್ತದೆ.

ಈ. 12,738 ಕಟ್ಟಡಗಳು

ಉ. ಉಪಯೋಗವಿದೆ. ಈ ಕೆಲಸದ ಜೊತೆಗೆ ಈ ಸಿಬ್ಬಂದಿಯು ವಿವಿಧ ಇಲಾಖೆಗಳ ಸರ್ಕಾರಿ ಬಾಕಿ ಹಣವನ್ನು ಕೂಡ ವಸೂಲು ಮಾಡುತ್ತಾರೆ.